ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೨ (೨೪೦೩)

ಸದಸ್ಯರ ಹೆಸರು : ಶ್ರೀ ಬಾಲರಾಜ್ (ಕೊಳ್ಳೇಗಾಲ)

ಉತ್ತರಿಸುವವರು : ಶ್ರೀ ಜಗದೀಶ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

ಪ್ರಶ್ನೆ

ಅ) ಯಳುದೂರು ತಾಲ್ಲೂಕು ಗುಂಬಳ್ಳಿ ಗ್ರಾಮದ ಸರ್ವೆ ನಂ. ೨,೮,೧೮೫,೧೮೬, ೧೮೭ ಯರಗಂಬಳ್ಳಿ ಸರ್ವೆ ನಂ ೩೫೭, ೨೭೦ ಹಾಗೂ ಗೌಡಹಳ್ಳಿ ಸರ್ವೆ ನಂ. ೬೩,೬೪, ೭೦ರ ಅಧಿಸೂಚನೆ ಹೊರಡಿಸಿರುವ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇದೆಯೇ ;

ಆ) ೧೯೯೩ ರಲ್ಲಿ ಉದ್ಘೋಷಣೆಯಾಗಿರುವ ಬಗ್ಗೆ ಉಪ ವಿಭಾಗಾಧಿಕಾರಿಯವರು ಇತ್ಯರ್ಥಪಡಿಸುವ ನಡವಳಿ ಬಗ್ಗೆ ಕೈಗೊಂಡ ಕ್ರಮವೇನು ; ಅಂತಿಮ ಉದ್ಘೋಷಣೆ ಆಗಿದೆಯೇ?

ಉತ್ತರ

ಅ) ಈ ಕಂದಾಯ : ಜಮೀನುಗಳನ್ನು "ಮೀಸಲು ಅರಣ್ಯ" ವನ್ನಾಗಿ ಮಾರ್ಪಡಿಸುವ ಉದ್ದೇಶಕ್ಕಾಗಿ ಕರ್ನಾಟಕ ಅರಣ್ಯ ಕಾಯ್ದೆ ೧೯೬೩ರ ವಿಧಿ ೪ (೧ (ಸಿ) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ : ಎ. ಹೆಚ್. ಹೆಚ್. ಎಫ್ ೬೭ ಎಫ್.ಎ. ಎಫ್ ೯೩ ದಿನಾಂಕ ೨೨.೧೧.೧೯೯೩ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ ;

ಆ) ಕಂದಾಯ ಜಮೀನುಗಳನ್ನು "ಮೀಸಲು ಅರಣ್ಯ" ವನ್ನಾಗಿ ಮಾರ್ಪಡಿಸುವ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆ ಕರೆದು ನಡವಳಿಕೆಯನ್ನು ಉಪ ವಿಭಾಗಾಧಿಕಾರಿಗಳು, ನಂಜನಗೂಡು ಉಪವಿಭಾಗ, ಇವರು ಕರ್ನಾಟಕ

ಅರಣ್ಯ ಕಾಯಿದೆ ೧೯೬೩ ರ ಸೆಕ್ಷನ್ ೫ರನ್ವಯ ದಿನಾಂಕ ೦೭-೦೨-೧೯೯೪ ರಲ್ಲಿ ಘೋಷಣೆಯನ್ನು ಹೊರಡಿಸಿರುತ್ತಾರೆ ದಿ. ೦೫.೦೧.೧೯೯೫ ರಲ್ಲಿ ನಡವಳಿಕೆ ನಡೆಸಿದ್ದು ನಂತರದಲ್ಲಿ ಇದರ ಮೇಲೆ ಕ್ರಮ ಕೈಗೊಳ್ಳುವಲ್ಲಿ ವಿಳಂಬ ಉಂಟಾಗಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಜಿಲ್ಲಾಧಿಕಾರಿಗಳು. ಚಾಮರಾಜನಗರ ಜಿಲ್ಲೆ ಇವರಿಗೆ ಸೂಕ್ತ ನಿರ್ದೇಶನ ನೀಡಿದ್ದು ಶೀಘ್ರ ಕ್ರಮ ಕೈಗೊಳ್ಳಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೩ (೨೪೦೪)

ಸದಸ್ಯರ ಹೆಸರು : ಶ್ರೀ ಎಸ್. ಬಾಲರಾಜ್ (ಕೊಳ್ಳೇಗಾಲ)

ಉತ್ತರಿಸುವವರು : ಶ್ರೀಜೆಸ್. ಶಿವಣ್ಣ (ರೇಷ್ಮೆ ಸಚಿವರು)

ಪ್ರಶ್ನೆ

ಅ) ರಾಜ್ಯ ಸರ್ಕಾರಿ ರೇಷ್ಮೆ ಸಂಸ್ಥೆಗಳು ಮತ್ತು ರೇಷ್ಮೆ ಕಾರ್ಖಾನೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೆ ವಿಶೇಷ ಸ್ವಯಂ ನಿವೃತಿ ಯೋಜನ ಜಾರಿಗೊಳಿಸುವುದು ಸರ್ಕಾರದ ಗಮನದಲ್ಲಿದೆಯೇ ;

ಆ) ಕೊಳ್ಳೇಗಾಲ ಸರ್ಕಾರಿ ರೇಷ್ಮೆ ಕಾರ್ಖಾನೆಯಲ್ಲಿನ ನೌಕರರು ಸ್ವಯಂ ನಿವೃತ್ತಿ ಪಡೆಯಲು ಅಶಕ್ತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಅನಾರೋಗ್ಯ ಪೀಡಿತರಿಗೆ ಹಾಗೂ ಅಶಕ್ತ ಕಾರ್ಮಿಕರಿಗಾದರೂ ವಿಶೇಷ ಸ್ವಯಂ ನಿವೃತ್ತಿ ಸೌಲಭ್ಯವನ್ನು ನೀಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆಗಳೇನು ;

ಉತ್ತರ

ಅ) ಇಲ್ಲ.

ಆ) ಬಂದಿದೆ.